ನೆಟ್ಟಗೆ ಕುಳಿತುಕೊಳ್ಳಬಹುದಿತ್ತು. ನಾನು ಅದು ಮಾಡಲಿಕ್ಕೆ ಹೋಗಲಿಲ್ಲ. ನಾನು ಕಾರ್ಪೋರೇಷನ್ ಕಮೀಷನರ್ , ಪೋಲೀಸ್ ಕಮಿಷನರ್ ಇಬ್ಬರನ್ನು ಕಳುಹಿಸಿ ಸ್ಥಳ ಪರಿಶೀಲನೆ ಮಾಡಿಸಿ ಒಂದು ಏಕರೆ 4 ಗುಂಟೆ ಏನಿದೆ, ಅದನ್ನು ಕಟ್ಟಿದಂಥ ಜಾಗ ಬಿಟ್ಟು 3 ಎಕರೆ 24 ಗುಂಟೆಯನ್ನು ಉಳಿಸಿ ಕಾಂಪೌಂಡ್ ವಾಲ್ ಹಾಕಿ ಸಾರ್ವಜನಿಕರಿಗೆ ಆಡಲಿಕ್ಕೆ ಬಿಡಬೇಕೆಂದು ಹೇಳಿದಂತ ನಿರ್ಣಯದ ಮೇಲೆ ಕೂಡ ಒಂದು ಅಪ್ರೀಸಿಯೇಷನ್ ನಮ್ಮ ಬೈರೇಗೌಡರ ಹತ್ತಿರ ಇಲ್ಲದಿದ್ದರೆ ಬಹಳ ಕಷ್ಟ.

ಶ್ರೀ ಆರ್. ವಿ. ದೇಶಪಾಂಡೆ – ನನಗೆ ಬಂದ ಮಾಹಿತಿ ಪ್ರಕಾರ ಈಗ ಕೌನ್ಸಿಲ್ ಅಡ್ಜರ್ನ್ ಆಗಿದೆ. ಮುಖ್ಯ ಮಂತ್ರಿಗಳೇ, ಪಾರ್ಲಿಮೆಂಟ್ ಮಿನಿಸ್ಟರು ಇದ್ದಾರೆ. ನಿಮಗೆ ಮುಖ್ಯವಾಗಿ ಇಲ್ಲಿ ಯಾವ ಬಿಲ್ ಪಾಸ್ ಆಗಬೇಕು ಅದನ್ನು ಮಾತ್ರ ಮಾಡಿಕೊಳ್ಳಿ. ಇಲ್ಲಿ ಪಾಸ್ ಆಗಿ ಅಲ್ಲಿ ಹೋಗುವ ಅವಶ್ಯಕತೆ ಇರುವುದಕ್ಕೆ ಸುಮ್ಮನೆ ಸಮಯವನ್ನು ಹಾಳು ಮಾಡುವುದು ಬೇಡ. ಅಲ್ಲಿ ಯಾವ ಬಿಲ್ ಪಾಸ್ ಆಗಿ ಇಲ್ಲಿ ಬಂದಿದೆ ಅದರ ಬಗ್ಗೆ ಚರ್ಚೆ ಆಗಲಿ ಏಕೆಂದರೆ ಅಲ್ಲಿ ಹೌಸ್ ಅಡ್ಜರ್ನ್ ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಎರಡು ವಿಧೇಯಕಗಳು ತುಂಬಾ ಇತಿಹಾಸಕರವಾದ ವಿಧೇಯಕಗಳು. ತಾವುಗಳೆಲ್ಲಾ ಆ ಸಂದರ್ಭದಲ್ಲಿ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಕೂಡ ಇದಕ್ಕೆ ತುಂಬಾ ಪ್ರಾಮುಖ್ಯತೆ ಕೊಟ್ಟುಕೊಂಡು ಓದಬೇಕು, ವಿಚಾರ ಮಾಡಬೇಕು, ಚರ್ಚೆ ಮಾಡಬೇಕು ಮತ್ತು ಎಲ್ಲಾ ವಿರೋಧ ಪಕ್ಷಗಳನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಇಂಥ ವಿಧೇಯಕಗಳನ್ನು ಪಾಸ್ ಮಾಡುವುದರಿಂದ ರಾಜ್ಯದಲ್ಲಿ ಒಂದು ಉತ್ತಮ ವಾತಾವರಣವನ್ನು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಏರ್ಪಡಿಸುವುದಕ್ಕೆ ಸಾಧ್ಯ ಎಂಬ ಅಭಿಪ್ರಾಯ ಏನು ಕೊಟ್ಟಿದ್ದೀರಿ ಅದಕ್ಕೆ ಸ್ಪಂದಿಸತಕ್ಕ ಕೆಲಸವನ್ನು ಸರ್ಕಾರ ಇವತ್ತು ಮಾಡುತ್ತಿದೆ. ಆ ದೃಷ್ಟಿಯಿಂದ ಸ್ವಲ್ಪ ನಾವು ವಿಚಾರ ಮಾಡೋಣ. ಏಕೆಂದರೆ ಮಸೂದೆ ಈಗಾತನೇ ತಮ್ಮ ಕೈಗೆ ಸಿಕ್ಕುತ್ತಿರುವುದರಿಂದ ಕಾಲಾವಕಾಶ ಬೇಕಾಗುತ್ತದೆ, ಆದುದರಿಂದ ಎರಡು ಮಸೂದೆಗಳನ್ನು ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಮುಂದೆ ಹಾಕಬಹುದೆಂದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು : ಈಗ ಕಾರ್ಯದರ್ಶಿಯವರು ವಿಧಾನ ಪರಿಷತ್ತಿನಿಂದ ಅಂಗೀಕೃತನಾದ ವಿಧೇಯಕಗಳನ್ನು ಮಂಡಿಸುವುದು :

ಕಾರ್ಯದರ್ಶಿ : ಮಾನ್ಯ ಉಪಾಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತನಾದ ಈ ಕೆಳಕಂಡ ಮಸೂದೆಗಳನ್ನು ನಾನು ಸಭೆಯ ಮುಂದಿಡುತ್ತಿದ್ದೇನೆ:

1) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ 1994

2) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ 1994

ಉಪಾಧ್ಯಕ್ಷರು :- ಮಂಡಿಸಲಾಯಿತುಅನುಬಂಧ VH , ಅನುಬಂಧ VIII.

Sri .R.V.Deshapande :- Whether it is passed there?

Sri S.M.Yahya :- Now we may call the Council for a day and all these Bills will be passed and that is what we have

discussed with the Chief Minister and the law Minister. Therefore, you allow us, so that we can move the Bill.

ಶಾಸನರಚನಾ ಕಾರ್ಯಕಲಾಪಗಳು

1994 ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ

ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

Sri S.M.Yahya (Minster for Higher Education) : I move: "That the Vishveshwaraya Technical University Bill may be taken into consideration"

(The question was proposed)

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ, ''1994ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು : ಖಂಡ 2 ರಿಂದ 55 ರವರೆಗೆ:

ಉಪಾಧ್ಯಕ್ಷರು : ''ಖಂಡ 2ರಿಂದ 55ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ.''

(ಖಂಡ 2 ರಿಂದ 55ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಪ್ರಸ್ತಾಪದ ಅಂಗೀಕಾರ :

Sri S.M.Yahya (Min. for Higher Education) :-

"That the Vishveshwaraya Technical University bill 1994 be passed."